ಇರದಿದ್ದ ಕಾಲದಲ್ಲಿ, ಅದೂ ಉಚ್ಚ ವರ್ಗದ ಈ ಇಬ್ಬರು ಹೆಣ್ಣುಮಕ್ಕಳು ಯಂತ್ರೋಪಕರಣಗಳಲ್ಲಿ ತೋರಿಸುತ್ತಿದ್ದ ಆಸ್ಥೆಯನ್ನು ಕಂಡು ಸಮಾಜ ಹುಬ್ಬೇರಿಸಿತ್ತು. ಎಡಾಳ ಗಣಿತಾಸಕ್ತಿ, ಮೈಕೇಲ್ ಫ್ಯಾರಡೆ, ಸರ್ ಡೇವಿಡ್ ಬ್ರೂಯ್ಸ್ಟರ್, ಚಾರ್ಲ್ಸ್ ವೆಸ್ಟೋನ್, ಚಾರ್ಲ್ಸ್ ಡಿಕೆನ್ಸ್ ಮುಂತಾದ ತಜ್ಞರ ಒಡನಾಟವನ್ನು ಕಲ್ಪಿಸಿತ್ತು.

'ಜಾಖರ್ ಮಗ್ಗ' – ಅಂದು ನೇಯುವ ಕೆಲಸವನ್ನು ಸುಲಭಗೊಳಿಸಿದ ಯಂತ್ರ. ಪಂಚ್ ಕಾರ್ಡ್‌ಗಳನ್ನು ಬಳಸಿ ಒಂದು ಕೀ ಒತ್ತಿದರೆ ಹತ್ತಾರು ದಾರಗಳು ನೇಯ್ಗೆ ಮಾಡುವ ಮೊಟ್ಟ ಮೊದಲ ಯಂತ್ರಭಾಷೆ (ಮಶಿನ್ ಲ್ಯಾಂಗ್ವೇಜ್) ಅದಾಗಿತ್ತು. ಎಡಾಗೆ ಜಾಖರ್ ಮಗ್ಗ ವಶೀಕರಣ ಮಾಡಿದಂತಿತ್ತು. ಆಕೆ ತಾಸುಗಟ್ಟಲೆ ಅದು ಕೆಲಸ ಮಾಡುವ ವೈಖರಿಯನ್ನೇ ನೋಡುತ್ತ ಮೈಮರೆಯುತ್ತಿದ್ದಳು.

19ನೇ ವಯಸ್ಸಿಗೆ ಎಡಾಳಿಗೆ ಲವ್ಲೇಸ್‌ನ ವಿಲಿಯಮ್ ಕಿಂಗ್ ಜೊತೆ ಮದುವೆಯಾಯಿತು. ಈಗ ಅವಳು ಎಡಾ ಲವ್ಲೇಸ್. ಮೂರು ವರ್ಷಗಳಲ್ಲಿ ಮೂರು ಮಕ್ಕಳು, ಎಡಾಳ ಪ್ರಪಂಚವೇ ಬೇರೆ ಯಾಯಿತು. ಆದರೆ 1841ರಲ್ಲಿ ಗಣಿತ ಮತ್ತೊಮ್ಮೆ ಅವಳನ್ನು ಸೆಳೆಯಿತು. ಮೇರಿ ಸೊಮರ್ವಿಲ್ ಜೊತೆ ಪುನಃ ಸಂಪರ್ಕ ಬೆಳೆಸಿ ಲೆಕ್ಕದ ಲೋಕಕ್ಕೆ ಇಳಿದಳು.

ಲ್ಯೂಗಿ ಮೆನಾಬ್ರಿಯಾ ಎನ್ನುವ ಎಂಜಿನಿಯರ್, ಚಾರ್ಲ್ಸ್ ಬ್ಯಾಬೇಜ್‌ನ 'ಅನಲಿಟಿಕಲ್ ಎಂಜಿನ್' ಕುರಿತು ಫ್ರೆಂಚ್ ಭಾಷೆಯಲ್ಲಿ ಬರೆದ ಪ್ರಬಂಧವೊಂದು ಎಡಾಗೆ ಓದಲು ದೊರೆಯಿತು. ಬ್ಯಾಬೇಜ್‌ನ ಭಾಷಣಗಳನ್ನು ಕೇಳಿ ಆತ ಆ ಪ್ರಬಂಧ ತಯಾರಿಸಿದ್ದ. 'ಡಿಫರೆನ್ಸ್ ಎಂಜಿನ್'ಗಿಂತ ಈ ಅನಲಿಟಿಕಲ್ ಎಂಜಿನ್ ಇನ್ನೂ ಹೆಚ್ಚಿನ ಲೆಕ್ಕಗಳನ್ನು ಮಾಡಿ ಬಲಯುತ ಯಂತ್ರದ ಕಲ್ಪನೆ ಮೂಡಿಸಿತ್ತು. ಅಂಕಗಣಿತ ಮತ್ತು ತರ್ಕದ ಭಾಗ, ಪುನರಾವರ್ತನೆಯ ಲೆಕ್ಕಗಳನ್ನು ಮಾಡಲು ಮಂಡಲ (ಲೂಪ್)ಗಳು ಹಾಗೂ ಪ್ರತ್ಯೇಕವಾದ ನೆನಪಿನ ಕೋಶಗಳು ಇದ್ದುದು ಅದರ ವಿಶೇಷ.

ಉತ್ಸಾಹಿ ಎಡಾ ಲವ್ಲೇಸ್, ಆ ಪ್ರಬಂಧವನ್ನು ಇಂಗ್ಲಿಷ್‌ಗೆ ಅನುವಾದಿಸಿದಳು. ಈ ಅನುವಾದವನ್ನು ಓದಿದ ಬ್ಯಾಬೇಜ್, 'ಅದಕ್ಕೆ ನಿನ್ನ ಕಲ್ಪನೆಗಳನ್ನೂ ಸೇರಿಸು' ಎಂದು ಎಡಾಳನ್ನು ಉತ್ತೇಜಿಸಿದ. ಕೆಲವು ದಿನ ಯೋಚಿಸಿ ಅನಲಿಟಿಕಲ್ ಎಂಜಿನ್ ಅನ್ನು ಉತ್ತಮಪಡಿಸುವ ತನ್ನ ಆಲೋಚನೆಗಳನ್ನು ಪ್ರತ್ಯೇಕ ಟಿಪ್ಪಣಿಗಳನ್ನಾಗಿಸಿ, ಮೂಲ ಪ್ರಬಂಧಕ್ಕೆ ಸೇರಿಸಿದಳು. ಹೊಸ ಪ್ರಬಂಧ 'ಸೈಂಟಿಫಿಕ್ ಮೆಮೊಯಿರ್' ಪತ್ರಿಕೆಯಲ್ಲಿ ಪ್ರಕಟಗೊಂಡಾಗ ಅದು ಮೊದಲಿನದರ ಮೂರರಷ್ಟು ದೀರ್ಘವಾಗಿತ್ತು.

ಬೀಜಗಣಿತದ ಲೆಕ್ಕಗಳನ್ನೂ ಎಡಾ ಅದರಲ್ಲಿ ಜೋಡಿಸಿದ್ದಳು. ಅದನ್ನು ಬಳಸಿ ಅಂದಿನ ಗಣಿತದ ಕ್ಲಿಷ್ಟಕರವಾದ ಬರ್ನೌಲಿ ಸಂಖ್ಯೆಗಳನ್ನು ಉತ್ಪಾದಿಸುವ ಹಂತಹಂತದ ಲೆಕ್ಕ ಅಥವಾ 'ಅಲ್ಗಾರಿದಮ್' ಅನ್ನು ಮಾನವ ಜಗತ್ತಿಗೆ ಮೊಟ್ಟಮೊದಲ ಬಾರಿಗೆ ಪರಿಚಯಿಸಿದಳು ಎಡಾ. ಅಲ್ಲಿ ಆಂಗ್ಲ 'ಎ'ಯಿಂದ 'ಜೆ'ವರೆಗೆ ಬಿಡಿಬಿಡಿ ಟಿಪ್ಪಣಿಗಳಿದ್ದವು. ಸಂಗೀತದ ಸ್ವರಗಳು, ಚಿತ್ರಗಳು, ಅಕ್ಷರಗಳು... ಹೀಗೆ ಅಂಕೆಗಳಾಗಿ ಪರಿವರ್ತಿಸಬಹುದಾದ ಯಾವುದೇ ಮಾಹಿತಿಯನ್ನು ಅಲ್ಗಾರಿದಮ್ ಆಗಿ ಬಳಸಬಹುದು ಎಂದು ಆಧುನಿಕ ಕಂಪ್ಯೂಟರ್‌ನ ಸ್ಪಷ್ಟ ಚಿತ್ರಣವನ್ನು ಮೂಡಿಸಿದ್ದಳು.

ತನ್ನ ಟಿಪ್ಪಣಿಯಲ್ಲಿ 'ಸಂಗೀತ ರಚನೆಯಲ್ಲಿ ವಿವಿಧ ಕ್ಲಿಷ್ಟ ರೀತಿಯ ಪುನರಾವರ್ತಿತ ಸ್ವರಗಳನ್ನು ವ್ಯಕ್ತಪಡಿಸಲು ಈ ಯಂತ್ರದ ಮೂಲಕ ಸಾಧ್ಯವಿದೆ' ಎನ್ನುತ್ತ, ಅನಲಿಟಿಕಲ್ ಎಂಜಿನ್ ಇಡೀ ಜಗತ್ತಿನ ಕಾರ್ಯವೈಖರಿಯನ್ನೇ ಬದಲಾಯಿಸಬಲ್ಲದು ಎಂದು ಅದಾಗಲೇ ತೋರಿಸಿಕೊಟ್ಟಿದ್ದಳು. 'ಜಾಖರ್ ಮಗ್ಗ ಹೇಗೆ ಬಟ್ಟೆಯ ಮೇಲೆ ಹೂಗಳ ಚಿತ್ರಗಳನ್ನು ಮೂಡಿಸುತ್ತದೋ ಅದೇ ರೀತಿ ಅನಲಿಟಿಕಲ್ ಎಂಜಿನ್ ಗಣಿತೀಯ ನಮೂನೆಗಳನ್ನು ಚಿತ್ರಿಸುವುದು' ಎಂದು ತನ್ನ ಟಿಪ್ಪಣಿಯಲ್ಲಿ ಸೇರಿಸಿದ್ದಳು. ಗಣಿತ ಬರೀ ಅಂಕೆಗಳ ಗೋಜಲು ಮೂಟೆಯಲ್ಲ, ತಂತ್ರಜ್ಞಾನದ ಮೂಲಾಧಾರ ಎಂದು ಭಾವಿಸಿದ್ದ ಎಡಾ, ತನ್ನದು ಕಲ್ಪನೆಯನ್ನೂ ಸೇರಿಸಿದ 'ಕಾವ್ಯ ವಿಜ್ಞಾನ' ಎನ್ನುತ್ತಿದ್ದಳು.

ಮಕ್ಕಳ ನಲ್ಮೆಯ ಮಾತುಗಳು, ಗಣಿತದ ಸಂತಸದ ಲೋಕ ಎಲ್ಲವನ್ನೂ ಮೀರಿ ಎಡಾಳ ಆರೋಗ್ಯ ಬಿಗಡಾಯಿಸತೊಡಗಿತ್ತು. ಆಕೆ ಗರ್ಭಕೋಶದ ಕ್ಯಾನ್ಸರ್‌ಗೆ ತುತ್ತಾಗಿದ್ದಳು. ತೀವ್ರ ನೋವನ್ನು ಕಡಿಮೆಗೊಳಿಸಲು ವೈದ್ಯರು ಆಗಾಗ ಅಫೀಮು ಕೊಡಲಾರಂಭಿಸಿದ್ದರು. ಹಲವಾರು ತಿಂಗಳು ನೋವನುಭವಿಸಿದ ಎಡಾ ತನ್ನ 36ನೇ ವಯಸ್ಸಿಗೆ ಮರಣ ಹೊಂದಿದಳು (1852 ನವೆಂಬರ್ 27).

ಓದುವ ಅಭ್ಯಾಸವನ್ನು ಬೆಳೆಸಿಕೊಂಡಿದ್ದ ಎಡಾಳಿಗೆ ಅಂದಿನ ವಿಜ್ಞಾನ ವಿಷಯಗಳಲ್ಲೂ ಆಸಕ್ತಿ ಇತ್ತು. ಮಾನವ ಬುರುಡೆಯ ಮೇಲಿರುವ ಉಬ್ಬು ತಗ್ಗುಗಳನ್ನು ಅಳೆದು ಆ ವ್ಯಕ್ತಿಯ ನಡತೆ ಮತ್ತು ವ್ಯಕ್ತಿತ್ವವನ್ನು ಅಳೆಯಬಹುದು ಎನ್ನುವ ಫ್ರೆನಾಲಜಿ ವಿಜ್ಞಾನದ (ಇಂದು ಹುಸಿ ವಿಜ್ಞಾನ ಎನಿಸಿದೆ) ಕುರಿತು ಅಧ್ಯಯನ ನಡೆಸಿ ಮೆದುಳು ಹುಟ್ಟುಹಾಕುವ ಭಾವನೆಗಳಿಗೆ ಗಣಿತದ ಅಲ್ಗಾರಿದಮ್ ಬರೆಯುವ ತಯಾರಿಯನ್ನೂ ನಡೆಸಿದ್ದಳು.


'ಬರಿಯ ಅಂಕಿಸಂಖ್ಯೆಗಳನ್ನು ಬಳಸಿ ಗಣಿತದ ಲೆಕ್ಕಗಳನ್ನು ಹುಟ್ಟುಹಾಕಿದ್ದು ಚಾರ್ಲ್ಸ್ ಬ್ಯಾಬೇಜ್. ಅದರ ಒಳಾರ್ಥವನ್ನು ಗ್ರಹಿಸಿ ಬೇರೆ ವ್ಯವಸ್ಥೆಗಳಿಗೆ ಅಳವಡಿಸುವ ಕಂಪ್ಯೂಟಿಂಗ್ ತಂತ್ರಜ್ಞಾನವನ್ನು ಕಂಡುಹಿಡಿದಿದ್ದು ಎಡಾ ಲವ್ಲೇಸ್. ಲೆಕ್ಕವು ಗಣಕ ಕಾರ್ಯವಾಗಿ ಮಾರ್ಪಟ್ಟ ಮೊಟ್ಟಮೊದಲ ಪರಿವರ್ತನೆ ಅದು!' ಎಂದು ಕಂಪ್ಯೂಟಿಂಗ್ ತಜ್ಞ ಡೊರಾನ್ ಸ್ವೇಡ್ ಎಂಬಾತ ಉದ್ಗರಿಸಿದ್ದ.

ಎಡಾ ಲವ್ಲೇಸ್‌ಳನ್ನು ಪಾತ್ರವಾಗಿಸಿ ಹಲವಾರು ನಾಟಕಗಳು, ಸಿನಿಮಾಗಳು ತಯಾರಾಗಿವೆ. ಅಮೆರಿಕದ ರಕ್ಷಣಾ ಇಲಾಖೆ ತಾನು ಅಭಿವೃದ್ಧಿಪಡಿಸಿದ ಸಾಫ್ಟ್‌ವೇರ್ ಭಾಷೆಯೊಂದಕ್ಕೆ 'ಎಡಾ' ಎಂದು ಹೆಸರಿಟ್ಟಿದೆ.

ಚಾರ್ಲ್ಸ್ ಬ್ಯಾಬೇಜ್ ಆಧುನಿಕ ಕಂಪ್ಯೂಟರ್‌ನ ತಂದೆ. ಹಾಗೆಯೇ ಎಡಾ ಲವ್ಲೇಸ್ ಆಧುನಿಕ ಕಂಪ್ಯೂಟರ್‌ನ ಮಾತೆ ಎಂದು ಜಗತ್ತು ಎಡಾಳನ್ನು ಗುರುತಿಸಿದೆ. ಮೊದಲ ಕಂಪ್ಯೂಟರ್ ಪ್ರೋಗ್ರಾಮರ್ ಎಂಬ ಪಟ್ಟವನ್ನು ಆಕೆಗೆ ಕೊಟ್ಟಿದೆ.

ಪ್ರತಿಕ್ರಿಯಿಸಿ: feedback@sudha.co.in


ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
ಗುರೂಜಿ ಮಹೇಶ್‌ಭಟ್
ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನ್ನು ಸಾಧಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
"ಗುರೂಜಿ ಮಹೇಶ್‌ಭಟ್"
ಇವರಿಂದ ಮಾತ್ರ ಈ ಸಾಧನೆ ಸಾಧ್ಯ
ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.
ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ
ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.
ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.
ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.
ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ
ಗುರೂಜಿ ಮಹೇಶ್‌ಭಟ್
9686999517